

ಬಿಲ್ಡರ್ ಕೈಯೆತ್ತಿದ್ದ. ಮಳೆಕೊಯ್ಲಿನಿಂದ ಹಿಡಿದು ಈಜುಕೊಳದವರೆಗೆ ಬಹಳಷ್ಟು ಕೆಲಸಗಳು ಇನ್ನೂ ಆಗಬೇಕಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ನಾವಿನ್ನೂ ತಾತ್ಕಾಲಿಕ ವಾಣಿಜ್ಯ ವಿದ್ಯುತ್ ಸಂಪರ್ಕದಲ್ಲೇ ಇದ್ದೆವಾದ್ದರಿಂದ, ಕಾಯಂ ವಿದ್ಯುತ್ ಸಂಪರ್ಕ ತೆಗೆದುಕೊಳ್ಳುವ ಕೆಲಸ ತುರ್ತಾಗಿ ಆಗಬೇಕಿತ್ತು. ಇದರ ಬೆನ್ನಿಗೆ, ಫೈರ್ ಕ್ಲಿಯರೆನ್ಸ್ ಆಗಿ ನಮಗೆಲ್ಲಾ ಸಿಆರ್ ತೆಗೆದುಕೊಳ್ಳಬೇಕಿತ್ತು. ಕಷ್ಟಪಟ್ಟು ದುಡಿದು ಖರೀದಿಸಿದ ನೆಲೆಯನ್ನು ಭದ್ರಗೊಳಿಸಿಕೊಳ್ಳಬೇಡವೆ. ಇದಕ್ಕೆಲ್ಲಾ ಇನ್ನೊಂದಷ್ಟು ಕೆಲಸಗಳು ಬಾಕಿ ಉಳಿದಿದ್ದವು. ವಾಣಿಜ್ಯ ಉದ್ದೇಶದ ವಿದ್ಯುತ್ ಸಂಪರ್ಕದ ಅವಧಿ ಮುಗಿಯುತ್ತಾ ಬಂದಿತ್ತು. ಅಪಾರ್ಟ್‌ಮೆಂಟ್‌ಗೆ ಪವರ್ ಕಟ್ ಭೀತಿ ಎದುರಾದ್ದರಿಂದ, ಎಲ್ಲರೂ ಸೇರಿ ಬಿಲ್ಡರ್ ಮೇಲೆ ಒತ್ತಡ ಹಾಕಲಾರಂಭಿಸಿದ್ದೆವು. ಎಷ್ಟೇ ಪ್ರಯತ್ನಿಸಿದರೂ, ಮುಂದಿನ ಕೆಲಸಗಳಿಗೆ ತನ್ನಲ್ಲಿ ಹಣ ಇಲ್ಲವೇ ಇಲ್ಲ ಎಂದು ತಾರಮ್ಮಯ್ಯ ಆಡಿಸುತ್ತಿದ್ದ ಆತ. ಕಡೆಗಂತೂ ನಾವು ಆತಂಕದಿಂದ ಎದುರುನೋಡುತ್ತಿದ್ದ ಗಳಿಗೆ ಬಂದು, ವಿದ್ಯುತ್ ಇಲಾಖೆಯವರು ಪವರ್ ಕಟ್ ಮಾಡಿದ್ದೂ ಆಯಿತು, ನಾವೆಲ್ಲ ಕೈಕಟ್ಟಿ ನೋಡಿದ್ದೂ ಆಯಿತು. ಒಂದೆರಡಲ್ಲ, ಎಂಟು ಮಹಡಿಗಳಲ್ಲಿ ಹರಡಿಕೊಂಡಿರುವ ನೂರಾರು ಮನೆಗಳ ಮಿಕ್ಸರ್‌ನಿಂದ ಹಿಡಿದು ಲಿಫ್ಟ್‌ವರೆಗೆ ಎಲ್ಲವೂ ಸ್ತಬ್ಧವಾಗಿಬಿಟ್ಟವು.

ಇಂಥ ಯಾವುದೇ ನೆವಕ್ಕೂ ಬದುಕು ನಿಲ್ಲುವುದಿಲ್ಲವಲ್ಲ. ಪ್ರತಿ ತಿಂಗಳು ಅಪಾರ್ಟ್‌ಮೆಂಟ್ ನಿರ್ವಹಣೆಗಾಗಿ ಯಾವ ಹಣವನ್ನು ಕೊಡುತ್ತಿದ್ದೆವೋ, ಅದರಲ್ಲೇ ಡೀಸೆಲ್ ತಂದು ಜನರೇಟರ್